

ತರಕಾರಿ ಮಾರಿದರೆ, ಉಳಿದವರು ಹಮಾಲಿ ಕೆಲಸ, ಕೂಲಿ ಕೆಲಸ, ರಸ್ತೆ ರಿಪೇರಿ ಕಸುಬಿಗೆ ಹೋಗುತ್ತೇವೆ. ಪಾಪಿ ಹೊಟ್ಟೆ ತುಂಬಬೇಕಲ್ಲ ಸರ್' ಎಂದ. ಅವನ ಮನೆ, ಮಕ್ಕಳು, ಸಂಸಾರದ ವಿಷಯ ಕೇಳಿದಂತೆಲ್ಲಾ ಹುರುಪುಗೊಂಡು ಉತ್ತರಿಸಿದ. 'ನಮ್ಮ ಬಡತನವೇ ನಮ್ಮ ಪ್ರಾಮಾಣಿಕತೆ ಸರ್. ಮೋಸ ಮಾಡಲ್ಲ. ಕೇಳಿ ನಿಮ್ಮಂತವರಿಂದ ಇನಾಮು ಇಸಕೊಂಡು ಅಷ್ಟೋ ಇಷ್ಟೋ ಮಕ್ಕಳನ್ನು ಓದಿಸುತ್ತಿದ್ದೇನೆ. ಅವೂ ನಮ್ಮಂತೆ ಕಷ್ಟಪಡಬಾರದಲ್ಲವೇ?' ಎಂದು ನಕ್ಕ. ಅಲ್ಲಿಗೆ ನಾನು ಕೊಡಲೇಬೇಕಾದ ಇನಾಮು ಹಣ ಮೊದಲೇ ನಿಕ್ಕಿ ಆದಂತಾಯಿತು.

ಫೋಟೊ ತೆಗೆಯುವವರಿಗೆ ಇಲ್ಲಿನ ಪ್ರತಿ ಜಾಗವೂ ಸ್ಟುಡಿಯೋ ಎಫೆಕ್ಟ್ ಕೊಡುತ್ತಿತ್ತು. ಚಳಿಗಾಲದ ಮಂಜು ಕವಿಯುವುದು ಕೂಡ ಚಿತ್ರಗಳಿಗೊಂದು ಘನತೆ ಕಲ್ಪಿಸುತ್ತಿತ್ತು. ಎಂಟು ಜನರ ನಮ್ಮ ಗುಂಪಿಗೆ ಅನೇಕ ಸಲ ಇಲ್ಲಿಗೆ ಬಂದು ಹೋಗಿದ್ದ ಅನಂತ ಮೂರ್ತಿಗಳು, 'ನಿಮಗಿಷ್ಟ ಬಂದ ಕಡೆ ಹೋಗಬಹುದು. ಯಾರು ಯಾರಿಗೂ ಕಾಯಬೇಡಿ. ತುಂಬಾ ಮುಖ್ಯ ಪಕ್ಷಿಗಳು ಕಂಡರೆ ಹೇಳುತ್ತೇನೆ. ಉಳಿದಂತೆ ನಿಮಗೆ ಈಗಾಗಲೇ ಇಲ್ಲಿ ಸಿಗುವ ಹಕ್ಕಿಗಳ ಸಂಪೂರ್ಣ ಮಾಹಿತಿ ಪ್ರಿಂಟ್ ಮಾಡಿಕೊಟ್ಟಿದ್ದೇನೆ. ನೀವು ಜೀವಮಾನದಲ್ಲಿ ಮೊದಲ ಸಲ ನೋಡುವ ಹಕ್ಕಿ ಚಿತ್ರಗಳು ಲೈಫರ್ ಇದ್ದಂಗೆ. ಅವನ್ನು ಬಿಡಬೇಡಿ. ಹಕ್ಕಿಗೆ ಸಮೀಪ ಹೋಗುವ ಮೊದಲು ರೆಕಾರ್ಡ್ ಶಾಟ್ ತೆಕ್ಕೊಂಡು ಬಿಡಿ. ಆಮೇಲೆ ಅಪ್ರೋಚ್ ಮಾಡಿ. ಹಕ್ಕಿ ಗಾಬರಿಯಾಗಿ ಹಾರಿ ಹೋದರೂ ನಿಮಗೆ ಲಾಸಾಗಲ್ಲ. ಫ್ರೇಮು ಮಾಡುವಾಗ ಬೆಳಕು ಯಾವ ದಿಕ್ಕಿನಿಂದ ಬೀಳುತ್ತಿದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಿ. ಹಕ್ಕಿಯ ಒಂದು ಚಿತ್ರ ತೆಗೆದ ತಕ್ಷಣ ಅದು ಹೇಗೆ ಬರುತ್ತಿದೆ ಎಂಬುದು ಪರಿಶೀಲಿಸಿಕೊಳ್ಳಿ. ಸೆಟ್ಟಿಂಗ್‌ನಲ್ಲಿ ಬದಲಾವಣೆ ಇದ್ದರೆ ತಕ್ಷಣ ಮಾಡಿಕೊಳ್ಳಿ. ಸುಮ್ಮನೆ ಬರಬರ ಎಂದು ಕ್ಲಿಕ್ ಮಾಡಿ ಆಮೇಲೆ ಎಲ್ಲಾ ಗೋವಿಂದ ಆಗಿ ಪಶ್ಚಾತ್ತಾಪ ಪಡಬೇಡಿ. ಸಂಜೆಗೆ ಎಲ್ಲರ ಚಿತ್ರಗಳನ್ನು ನೋಡುತ್ತಾ ಏನೇನು ತಪ್ಪಾಗಿದೆ ಎನ್ನುವುದನ್ನು ಚರ್ಚಿಸೋಣ. ಆಲ್ ದಿ ಬೆಸ್ಟ್. ಮಧ್ಯಾಹ್ನದ ಊಟದ ಹೊತ್ತಿಗೆ ಡಾಟರ್ ಪಾಯಿಂಟ್ ಬಳಿ ಸಿಗೋಣ' ಎಂದು ಶುಭ ಕೋರಿದರು.

ಕಿಯೋಲಾಡಿಯೊ ಅಭಯಾರಣ್ಯ ಹೊಕ್ಕ ಮೇಲೆ ಚದುರಿ ಹೋದೆವು. ನಮಗಿಷ್ಟವಾದ ಅಪರೂಪದ ಹಕ್ಕಿಗಳು ಸಿಕ್ಕಾಗ ಅಲ್ಲೇ ಕೂತು ಬಿಡುತ್ತಿದ್ದೆವು. ಅದರ